# ಕಲಿಕಾಫಲ – 4

ಪರಿಸರದಲ್ಲಿರುವ ಜಾನಪದಗೀತೆ, ಕಥೆಗಳು, ಶಿಶುಗೀತೆಗಳ ಬಗ್ಗೆ ಚರ್ಚೆಮಾಡುವರು ಮತ್ತು ಕರಕುಶಲ ಕಲೆ, ವಾಸ್ತು ಶಿಲ್ಪಕಲೆ, ನೃತ್ಯ ಕಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವರು.

## ಚಟುವಟಿಕೆ 1: ಜಾನಪದ ಹಾಡು ಹೇಳಿ.

ನೀವು ಮತ್ತು ನಿಮ್ಮ ಸಹಪಾಠಿ ಜೊತೆ ಈ ಜಾನಪದ ಗೀತೆಯನ್ನು ಹಾಡಿ. ಈ ಜಾನಪದ ಗೀತೆಯ ಕುರಿತು ನೀವು ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ, ಚರ್ಚಿಸಿದ ಪ್ರಮುಖ ಅಂಶಗಳನ್ನು ಬರೆಯಿರಿ.

### ಮುಂಜಾನೆದ್ದು ಕುಂಬಾರಣ್ಣ

ಮುಂಜಾನೆದ್ದು ಕುಂಬಾರಣ್ಣ. ಹಾಲು ಬಾನುಂಡಾನ..  
ಹಾರ್ಯಾರಿ ಮಣ್ಣ ತುಳಿದಾನ..  
ಹಾರಿಹಾರ್ಯಾರಿ ಮಣ್ಣ ತುಳಿಯುತ್ತ ಮಾಡ್ಯಾನ..  
ನಾರ್ಯಾರು ಹೊರುವಂತ ಐರಾಣಿ.

ಹೊತ್ತಾರೆದ್ದು ಕುಂಬಾರಣ್ಣ. ತುಪ್ಪ ಬಾನುಂಡನ..  
ಗಟ್ಟಿಸಿ ಮಣ್ಣ ತುಳಿದಾನ.  
ಗಟ್ಟಿಸಿ ಮಣ್ಣ ತುಳಿಯುತ್ತ ಮಾಡ್ಯಾನ.  
ಮಿತ್ರೆರು ಹೊರುವಂತ ಐರಾಣಿ

ಈ ಜನಪದ ಗೀತೆ ಬಹಳ ಸೊಗಸಾಗಿದೆ.ಇದರಲ್ಲಿ ಐರಾಣಿ ಎನ್ನುವ ಪದದ ಅರ್ಥ ಗೊತ್ತಿಲ್ಲ ಡಿಕ್ಷನರಿಯಲ್ಲಿ ಹುಡುಕಿದಾಗ ಐರಣಿ ಎಂದರೆ ಮಣ್ಣಿನ ಕೊಡ ಅಥವಾ ಮಣ್ಣಿನ ಮಡಕೆ ಸುಂದರವಾಗಿ ಮಾಡಿರುವಂತಹ ಮಣ್ಣಿನ ಮಡಕೆ ಇದನ್ನು ನಾರಿಯರು ಮಿತ್ರೆಯರು ಬರುತ್ತಾರೆ ಎಂದು ಈ ಜನಪದ ಗೀತೆಯಲ್ಲಿ ಹೇಳಲಾಗಿದೆ.

ಮುಂಜಾನೆ ಹೊತ್ತಾರೆ ಹೇಳುವ ಕುಂಬಾರಣ್ಣನ ಪರಿ ಬಹಳ ಚೆನ್ನಾಗಿದೆ ಹಾಲು ಬಾನು ಎಂದರೆ ಮಜ್ಜಿಗೆ ತುಪ್ಪ ಬಾನು ತಿಂದು ಅವನು ಮಣ್ಣು ತುಳಿದು ಮಡಕೆ ಮಾಡುವ ರೀತಿ ಬಹಳ ಸೊಗಸಾಗಿ ಹೇಳಲಾಗಿದೆ.

1. ಈ ಜನಪದ ಹಾಡಿನಲಿ ನಿಮಗೆ ವಿಶಿಷವೆನಿಸಿದ ಪದಗಳನು ಗುರುತಿಸಿ. ಅವುಗಳ ಅರ್ಥಗಳನ್ನು ಹುಡುಕಿ ಪಟ್ಟಿ ಮಾಡಿ.

ಐರಾಣಿ ಎಂದರೆ ಸುಂದರವಾಗಿ ಮಾಡಿದ ಮಡಕೆ.  
ಬಾನು ಎಂದರೆ ಮಜ್ಜಿಗೆ  
ಹೊತ್ತಾರೆ ಎಂದರೆ ಮುಂಜಾನೆ  
ನಾರ್ಯಾರು ಅಂದರೆ ನಾರಿಯರು

2. ಈ ಜನಪದ ಹಾಡು ಏನನ್ನು ತಿಳಿಸುತ್ತದೆ?

ಈ ಜನಪದ ಹಾಡು ಕುಂಬಾರನು ಹೇಗೆ ಮಡಕೆಯನ್ನು ಮಾಡುತ್ತಾನೆ ಅವನ ಪ್ರತಿ ದಿನದ ಕೆಲಸ ಕಾರ್ಯಗಳು ಏನು ಎನ್ನುವುದನ್ನು ತಿಳಿಸುತ್ತದೆ ಮತ್ತು ಜೀವನದ ಉದ್ದೇಶವನ್ನು ತಿಳಿಸುತ್ತದೆ ಪ್ರತಿಯೊಬ್ಬರು ತಮ್ಮ ಕರ್ತವ್ಯವನ್ನು ಮಾಡಬೇಕು ಎಂದು ತಿಳಿಸುತ್ತದೆ.

3. ಇಂತಹ ಜಾನಪದ ಗೀತೆಯೊಂದನ್ನು ಅಥವಾ ಅದರ ಕೆಲವು ಸಾಲನ್ನು ಬರೆದು ಅವುಗಳ ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿ.

| ಜಾನಪದ ಗೀತೆ | ಪ್ರಮುಖ ಅಂಶಗಳು |
| --- | --- |
| ನವ್ವಾಲೆ ಬಂತಪ್ಪ ನವ್ವಾಲೆ<br>ಸೋಗೆಯ ಬಣ್ಣಾದ ನವ್ವಾಲೆ \|\|<br>ಬತ್ತದ ಮೆಯ್ಯೋದು ನವ್ವಾಲೆ<br>ಬತ್ತದ ಹೊಟ್ಟೋಂದ ಮೆಯ್ಯೋದು ನವ್ವಾಲೆ<br>ಬತ್ತವ ಕಾಯಲು ಓಡುತ ಬಂದಾರೆ<br>ಅತ್ತಿತ್ತ ಓಡಿತು ನವ್ವಾಲೆ<br>ರಾಗಿಯ ಮೆಯ್ಯೋದು ನವ್ವಾಲೆ<br>ರಾಗಿ ಹೊಟೊಂದ ಮೆಯ್ಯೋದು ನವ್ವಾಲೆ<br>ರಾಗಿಯ ಕಾಯಲು ಓಡೂತ ಬಂದಾರೆ<br>ರಾಗವ ಪಾಡಿತು ನವ್ವಾಲೆ | ನವ್ವಾಲೆ ಎಂದರೆ ನವಿಲು, ಸೋಗೆ ಎಂದರು ನವಿಲು,<br>ಸೋಗೆಯ ಬಣ್ಣ ಎಂದರೆ ನವಿಲಿನ ಬಣ್ಣ,<br>ಈ ಜನಪದ ಗೀತೆಯಲ್ಲಿ ನವಿಲನ್ನು ಬಣ್ಣಿಸಿದ್ದಾರೆ.<br>ನವಿಲು ಏನೇನು ತಿನ್ನುತ್ತದೆ ಮತ್ತು ಹೇಗೆ ಅದು ವರ್ತಿಸುತ್ತದೆ<br>ಎಂಬುದನ್ನು ತಿಳಿಸಿದ್ದಾರೆ ನವಿಲು ಒಂದು ಕಾಡು ನಲ್ಲಿ ಜೀವಿಸುವ<br>ಪಕ್ಷಿಯಾಗಿದ್ದು ಇದು ಭತ್ತದ ಹೊಲಗಳಿಗೆ ಮತ್ತು ರಾಗಿಯ ಹೊಲಗಳಿಗೆ<br>ಬಂದು ಭತ್ತ ಮತ್ತು ರಾಗಿಯನ್ನು ತಿನ್ನುತ್ತಿರುತ್ತದೆ ಹೊಲದವರು<br>ಏನಾದರೂ ಓಡಿಸಲು ಬಂದರೆ ಅದು ಅತ್ತಿಂದಿತ್ತ ಓಡುತ್ತದೆ<br>ಎನ್ನುವುದನ್ನು ಈ ಜನಪದ ಗೀತೆಯಲ್ಲಿ ಸೊಗಸಾಗಿ ತಿಳಿಸಿದ್ದಾರೆ. |

## ಚಟುವಟಿಕೆ 2: ಹಾಡೊಂದು ಗೀತೆ

**ಶಿಶುಗೀತೆಯನ್ನು ಸಹಪಾಠಿ ಜೊತೆ ಹಾಡಿ. ನಂತರ ಅದಕ್ಕೆ ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

ಗಿಳಿಗಳೆಷ್ಟು ಗಿಡಗಳೆಷ್ಟು
ಹೇಳಬೇಕು ಪಕ್ಕಾ!
ಲಕ್ಷ್ಯಗೊಟ್ಟು ಕೇಳಿ ನೀವು
ಬಿಡಿಸಬೇಕು ಲೆಕ್ಕಾ!

ಎಷ್ಟೋ ಗಿಳಿಯು ಎಷ್ಟೋ ಮರವು
ಇದ್ದವಲ್ಲಿ ಜಾಣ!
ಗಿಡಕೆ ಗಿಳಿ ಗಿಳಿಗೆ ಗಿಡ
ಎಂದ್ರೆ ಎಂಥ ಪ್ರಾಣ!

ಗಿಡಕೆ ಎರಡು ಗಿಳಿಯು ಕೂಡಲ್
ಒಂದು ಗಿಡವು ಹೊರಗೆ!
ಗಿಡಕೆ ಒಂದು ಗಿಳಿಯು ಕೂಡಲ್
ಒಂದು ಗಿಳಿಯು ಹೊರಗೆ!

ಎಷ್ಟು ಗಿಡ ಎಷ್ಟು ಗಿಳಿ
ಲೆಕ್ಕ ಹಾಕಿ ಬೇಗ!
ಸರಿ ಉತ್ರ ಹೇಳಿ ಬಿಟ್ರೆ
ಪದಕದ್ದೊಂದು ಕಡಗ!

ಗಿಳಿಯು ಗಿಡವು ಕೂಡಲಾಗ
ಬರುವ ಅಂಕಿ ಏಳು!
ಬೇಗ ಬೇಗ ಸುಳಿವು ಅರಿತು
ಒಗಟ ಬಿಡಿಸಿ ಹೇಳು!

– ಚಂದ್ರಗೌಡ ಕುಲಕರ್ಣಿ

1. ಈ ಶಿಶುಗೀತೆಯಲ್ಲಿ ನಮೂದಾದ ಗಣಿತ ನಿರೂಪಣೆಯನ್ನು ವಾಕ್ಯರೂಪದಲ್ಲಿ ಬರೆಯಿರಿ.

ಮೂರನೆಯ ಪಾದದಲ್ಲಿ ಒಂದು ಗಿಡಕ್ಕೆ ಎರಡು ಗಿಳಿಗಳು ಕುಳಿತರೆ ಒಂದು ಗಿಡ ಹೊರಗೆ ಉಳಿಯುತ್ತದೆ ಒಂದು ಗಿಡಕ್ಕೆ ಒಂದೇ ಗಿಳಿಯು . ಕುಳಿತರೆ ಒಂದು ಬಿಳಿ ಹೊರಗೆ ಉಳಿಯುತ್ತದೆ.

ನಾಲ್ಕನೆಯ ಪಾದದಲ್ಲಿ ಎಷ್ಟು ಗಿಡ ಎಷ್ಟು ಗಿಳಿ ಎಂದು ಲೆಕ್ಕ ಹಾಕಲು ತಿಳಿಸುತ್ತಾರೆ ಹಾಗೆ ತಿಳಿಸಿದರೆ ಬಹುಮಾನ ಉಂಟು ಎಂದು ತಿಳಿಸುತ್ತಾರೆ.

ಕೊನೆಯ ಪಾದದಲ್ಲಿ ಗಿಳಿಯು ಗಿಡವು ಕೂಡಿದಾಗ 7 ಎಂಬ ಅಂಕಿ ಬರುತ್ತದೆ ಬೇಗ ಈ ಸುಳಿವನ್ನು ಅರಿತು ಒಗಟು ಬಿಡಿಸಿ ಎಂದು ತಿಳಿಸುತ್ತಾರೆ.

ಈ ಒಗಟಿನ ಉತ್ತರ ನಾಲ್ಕು ಗಿಳಿ, ಮೂರು ಗಿಡ.

2. ನಿಮ್ಮ ಮನೆಯಲ್ಲಿ ಮಕ್ಕಳನ್ನು ಮಲಗಿಸುವಾಗ ಅಜ್ಜಿ ಹಾಡುವ ಶಿಶುಗೀತೆ ಅಥವಾ ಲಾಲಿ ಹಾಡುಗಳನ್ನು (ಕನಿಷ್ಠ 2) ಬರೆಯಿರಿ.

ಲಾಲಿ ಹಾಡು..

ಲಾಲಿ ಲಾಲಿ ಜೋ ಜೋ ಜೋ
ನನ್ನ ಮುದ್ದು ಜೋ ಜೋ ಜೋ..
ಹಾಡುವೆ ನಿನಗೆ ನಾ ಲಾಲಿ,
ಹಾಯಾಗಿ ಮಲಗು ನೀ ನನ್ನ ಮಡಿಲಲ್ಲಿ..
ನಿದ್ದೆ ಗುಮ್ಮ ಬರುತ್ತಾನೋ,
ನಿದಿರೆಯ ಹೊತ್ತು ತರುತಾನೋ..
ಹಾಯಾಗಿ ನಿನ್ನ ಮಲಗ್ಗಿಸಿ,
ಸುಖನಿದ್ರೆ ನಿನಗೆ ತರುತ್ತಾನೋ..
ಜೋಜೋ ಲಾಲಿ ಜೋ ಜೋ ಜೋ..
ನನ್ನ ಚಿನ್ನ ಜೋ ಜೋ ಜೋ..
ಮಗುವಂತೆ ನೀ ಮಲಗಿ ನಿದ್ರಿಸಲು,
ನಿನ್ನ ತಲೆ ಸವರುತ ನನ್ನಯ ಕಯ್ಯ ಬೆರಳು..
ಹಾಡುವೆ ನಾನು ಜೋಲಾಲಿ
ಮಲಗೆ ನನ್ನ ಚಿನ್ನಕುರುಳಿ..

ಜೋ ಜೋ ಲಾಲಿ ಹಾಡು

ಜೋ ಜೋ ಬಿಳಿಬೆಟ್ಟದೊಡೆಯನ ಕೂಸೇ
ಜೋ ಜೋ ಪಾಲ್ಗಡಲರಸನ ಮಗಳೇ
ಜೋ ಜೋ ಜೋ ಮಾತಿನೊಳಗಿರುವಂಥ ಹುರುಳೇ
ಜೋ ಜೋ ಕಂದಮ್ಮ ಮಲಗಮ್ಮ ಬೇಗ || ಜೋ ಜೋ||
ನೀನು ನಗುತಿದ್ದರೇ ಶರ್ವಾಣಿ ಗೌರೀ
ನೀನು ಹಠ ಹಿಡಿದರೆ ಚಂಡಿ ಚಾಮುಂಡಿs
ಮೀನು ಕಣ್ಣಿನವಳೆ ಕಾಮಾಕ್ಷಿ ಸೊಬಗೀ
ನಾನು ತೂಗುವೆ ನಿನ್ನ ಜೋಜೋಜೋ ಲಾಲಿ || ಜೋ ಜೋ||
ಕಮಲದಲೀ ಕುಳಿತೋಳೆ ಸಿರಿಲಕುಮಿ ಚಿನ್ನೆ
ಅಮೃತಾವ ಕಡೆವಾಗ ಹುಟ್ಟಿದ ರನ್ನೆ
ಒಮ್ಮನದಿ ಮಲಗಮ್ಮ ಶ್ರೀಹರಿಯ ನಲ್ಲೆ
ಸುಮತಿ ನಿನ್ನನು ಪಾಡಿ ತೂಗುವೆನಿಲ್ಲೆ || ಜೋ ಜೋ||
ಪರಬೊಮ್ಮನಾ ಅರಸಿ ಸರಸೋತಿ ಮಾತೇ
ಕರದಲ್ಲಿ ಪಿಡಿದಿಹ ವೀಣೆ ದನಿಯಂತೇ
ಸರಸರನೆ ಹಾಡುವೆ ಸರಸರನೆ ಮಲಗೇ
ಉರುಳಾಟ ಬೇಡವೆ ನಿದ್ದೆಗೆ ಜಾರೇ ||
ಹೊರಳಾಟ ಬೇಡಸವೆ ನಿದ್ದೆ ನೀ ಮಾಡೇ||ಜೋ ಜೋ||

## ಚಟುವಟಿಕೆ 3: ಜನಪದ ಪ್ರಕಾರಗಳು

ನೀಡಲಾದ ಜನಪದದ ವಿವಿಧ ಪ್ರಕಾರಗಳನ್ನು ಗಮನವಿಟ್ಟು ಓದಿ ಅರ್ಥಮಾಡಿಕೊಳ್ಳಿ. ನೀಡಲಾಗಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

| | |
|---|---|
| ಕಂಕಣ ಕಟ್ಟುವ. | ವೀರಗಾಸೆ. |
| ಬಾಗೀನ ಕೊಡುವ. | ಹುಲಿ ವೇಷ. |
| ಮಂಗಳಾರತಿ. | ತಮಟೆ, ನಗಾರಿ ಹಾಡು. |
| ಸೋಬಾನೆ ಪದ. | ಹಸೆಮಣೆ, ಶಾಸ್ತ್ರದ ಹಾಡು. |
| ಗೀಗಿ ಪದ. | ಪಟ ಕುಣಿತ. |
| ಜೋಗತಿ. | ಡೊಳ್ಳು ಕುಣಿತ. |
| ದಾಸಯ್ಯ. | ಕಂಗೀಲು ಕುಣಿತ. |
| ಹಗಲು ವೇಷ. | ಕಂಕಣ ಬಳೆ ತೊಡಿಸುವ ಹಾಡು. |
| ತಂಬೂರಿ ಹಾಡು. | ಲಂಬಾಣಿಗರ ಹಾಡು. |
| ಗೊರವರ ಕುಣಿತ. | ಹಾಲುಮತದ ಹಾಡು. |
| ಯಕ್ಷಗಾನ. | ಬಳೆಗಾರರ ಹಾಡು. |
| ಕೋಲಾಟ. | ಸುಗ್ಗಿ ಹಾಡು. |

1. ಈ ಜನಪದ ಪ್ರಕಾರಗಳಲ್ಲಿ ನೀವು ನೋಡಿರುವ ಜಾನಪದ ಪ್ರಕಾರಗಳನ್ನು ಪಟ್ಟಿ ಮಾಡಿರಿ.

**ಸೋಬಾನೆ ಪದ, ಮಂಗಳಾರತಿ, ಗೀಗಿ ಪದ, ದಾಸಯ್ಯ, ಹಗಲುವೇಷ, ಗೊರವರ ಕುಣಿತ, ಕೋಲಾಟ, ವೀರಗಾಸೆ, ಹುಲಿವೇಷ, ತಮಟೆ,ನಗಾರಿ ಹಾಡು ,ಸುಗ್ಗಿ ಹಾಡು**

2. ಈ ಜನಪದ ಪ್ರಕಾರಗಳನ್ನು ನೀವು ಎಲ್ಲೆಲ್ಲಿ ಕಂಡಿರುವಿರಿ?

**ಜಾತ್ರೆಗಳಲ್ಲಿ ಹಬ್ಬಗಳಲ್ಲಿ ಹಳ್ಳಿಯ ಸಮಾರಂಭಗಳಲ್ಲಿ ಮದುವೆ ಮನೆಗಳಲ್ಲಿ ಜಾನಪದ ಕಾರ್ಯಕ್ರಮಗಳಲ್ಲಿ ಜಾನಪದ ಸ್ಪರ್ಧೆಗಳಲ್ಲಿ ಶಾಲೆಗಳಲ್ಲಿ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಶಾಲಾ ವಾರ್ಷಿಕೋತ್ಸವ ಸಮಾರಂಭಗಳಲ್ಲಿ ನಾವು ನೋಡುತ್ತೇವೆ.**

3. ಈ ಜನಪದ ಪ್ರಕಾರಗಳಲ್ಲಿ ನೀವು ನೋಡಿರದ ಪ್ರಕಾರಗಳು ಯಾವುವು?

**ಪಟ ಕುಣಿತ, ಡೊಳ್ಳು ಕುಣಿತ, ಕಂಗಿಲು ಕುಣಿತ, ಕಂಕಣ ಬಳೆ ತೊಡಿಸುವ ಹಾಡು, ಲಂಬಾಣಿಗರ ಹಾಡು, ಹಾಲುಮತದ ಹಾಡು, ಬಳೆಗಾರರ ಹಾಡು, ತಂಬೂರಿ ಹಾಡು, ಯಕ್ಷಗಾನ .**

**ಚಟುವಟಿಕೆ 4: ಜಾನಪದ ಕಥೆ.**

**ಈ ಜನಪದ ಕಥೆಯನ್ನು ಓದಿ, ನಂತರ ನಿಮ್ಮ ಸಹಪಾಠಿಗಳೊಂದಿಗೆ ಆ ಕುರಿತು ಚರ್ಚಿಸಿ, ಜಾನಪದ ಕಥೆಯನ್ನು ಹೇಳಿರಿ.**

### ಕಪ್ಪೆ ರಾಜಕುಮಾರಿಯ ಕತೆ

ಒಂದೂರಲ್ಲಿ ಒಬ್ಬ ರಾಜ ಇದ್ದ. ಅವನಿಗೆ ಮೂರು ಗಂಡು ಮಕ್ಕಳು. ರಾಜಕುಮಾರರು ಮದುವೆ ವಯಸ್ಸಿಗೆ ಬಂದಾಗ ಅವರಿಗೆ ಮದುವೇ ಮಾಡಲು ರಾಜ ಒಂದು ಸ್ಪರ್ಧೆ ಏರ್ಪಡಿಸುತ್ತಾನೆ. ಮೂರೂ ರಾಜಕುಮಾರರಿಗೂ ಒಂದೊಂದು ಬಿಲ್ಲು ಬಾಣ ಕೊಟ್ಟು, ಯಾರು ಯಾರ ಮನೆಗೆ ಬಾಣವನ್ನು ಕಳಿಸುತ್ತಾರೊ ಅವರ ಮನೆಯಿಂದ ಹೆಣ್ಣನ್ನು ತಂದು ಮದುವೆ ಮಾಡಲಾಗುವುದು ಎಂದು ಹೇಳುತ್ತಾನೆ.

ಮೊದಲನೇ ರಾಜಕುಮಾರ ಅಗಸರ ಮನೆಗೆ ಬಾಣ ಕಳಿಸುತ್ತಾನೆ. ಸರಿ ಅವನಿಗೆ ಅಗಸರ ಮಗಳೊಡನೆ ಮದುವೆ ಅಗುತ್ತದೆ. ಎರಡನೇ ರಾಜಕುಮಾರ ಕುಂಬಾರನ ಮನೆಗೆ ಬಾಣ ಕಳಿಸುತ್ತಾನೆ. ಅವನಿಗೆ ಕುಂಬಾರನ ಮಗಳೊಡನೆ ಮದುವೆ ಆಗುತ್ತದೆ. ಕಿರಿಯ ರಾಜಕುಮಾರ ಕಪ್ಪೆ ಮನೆಗೆ ಬಾಣ ಕಳಿಸುತ್ತಾನೆ. ರಾಜ ಆಡಿದ ಮಾತಿನಂತೆ, ಕೊನೆಯವನಿಗೆ ಕಪ್ಪೆಯ ಮಗಳೊಡನೆ ಮದುವೆ ಮಾಡುತ್ತಾನೆ. ಕಿರಿಯ ರಾಜಕುಮಾರ ಕಪ್ಪೆಗಾಗಿ ಒಂದು ಗೂಡನ್ನು ಕಟ್ಟಿ ಅಲ್ಲಿ ಕಪ್ಪೆ ವಾಸಿಸುವಂತೆ ಏರ್ಪಾಡು ಮಾಡುತ್ತಾನೆ. ಒಮ್ಮೆ ರಾಜ ತನ್ನ ಮೂರು ಪುತ್ರರನ್ನು ಕರೆದು ನಾಳೆ ನೀವೆಲ್ಲರೂ ನಿಮ್ಮ ಹೆಂಡತಿಯರಿಂದ ಒಂದು ಮಗುವಿನ ಉಡುಗೆಯನ್ನು ತಯಾರಿಸಿಕೊಂಡು ಬರಬೇಕು ಎಂದು ಅಪ್ಪಣೆಯಿತ್ತ. ಅಗಸ ಮತ್ತು ಕುಂಬಾರನ ಮಗಳು ಹೇಗೊ ತಮಗೆ ತಿಳಿದ ಹಾಗೆ ಉಡುಗೆಯನ್ನು ತಯಾರಿಸಿದರು. ಕಿರಿಯ ರಾಜಕುಮಾರ ತನ್ನ ಮನೆಗೆ ಬಂದು ಅಳುತ್ತಾ ಕುಳಿತ. ಆಗ ಕಪ್ಪೆ ತನ್ನ ಗೂಡಿನಿಂದ ಹೊರಬಂದು "ಯಾಕೆ ಅಳುತಿದ್ದೀಯಾ?" ಎಂದು ಕೇಳಿತು. ಅದಕ್ಕೆ ರಾಜಕುಮಾರ "ಅಪ್ಪ ಹೇಳಿದ್ದಾರೆ ನಿನ್ನ ಕೈಯಿಂದ ಮಕ್ಕಳ ಉಡುಪನ್ನು ತಯಾರಿಸಿಕೊಂಡು ಬರಬೇಕು ಎಂದು. ಆದರೆ ನೀನೋ ಕಪ್ಪೆ. ನೀನು ಹೇಗೆ ಉಡುಪನ್ನು ತಯಾರಿಸಬಲ್ಲೆ" ಎಂದು ಮತ್ತೆ ಅಳತೊಡಗಿದ. ಆಗ ಕಪ್ಪೆ "ಅದಕ್ಯಾಕೆ ಅಳುತ್ತೀಯಾ, ನನಗೆ ಉಡುಗೆ ತಯಾರಿಸುವ ವಿಧಾನ ಗೊತ್ತು" ಎಂದು ಹೇಳಿ ತನ್ನ ಗೂಡಿಗೆ ಹೊಗಿ ಹೊರಬರುವಾಗ ಒಂದು ಸುಂದರ ಉಡುಗೆಯನ್ನು ತಂದು ರಾಜಕುಮಾರನಿಗೆ ನೀಡಿತು. ರಾಜಕುಮಾರನಿಗೆ ಆಶ್ಚರ್ಯವೋ ಆಶ್ಚರ್ಯ! ಸಂತೋಷದಿಂದ ಮರುದಿನ ಆಸ್ಥಾನಕ್ಕೆ ಉಡುಗೆಯನ್ನು ಕೊಂಡೊಯ್ಯುತ್ತಾನೆ. ರಾಜ ಮೊದಲಿಗೆ ಅಗಸನ ಮಗಳ ಉಡುಗೆ ನೋಡುತ್ತಾನೆ, ಅಷ್ಟೇನೂ ನಯಗಾರಿಕೆಯಿಲ್ಲದ ಉಡುಗೆ ಎಂದು ತಿರಸ್ಕರಿಸುತ್ತಾನೆ. ನಂತರ ಕುಂಬಾರನ ಮಗಳ ಉಡುಗೆಯನ್ನು ಕೂಡ ತಿರಸ್ಕರಿಸುತ್ತಾನೆ. ಕಿರಿಯ ರಾಜಕುಮಾರ ಉಡುಗೆಯನ್ನು ತೋರಿದಾಗ ರಾಜನ ಕಣ್ಣುಗಳು ಅಗಲವಾಗಿ "ವಾಹ್!" ಎಂಬ ಉದ್ಗಾರದೊಂದಿಗೆ ಕಿರಿಯ ಮಗನನ್ನು ಆಲಂಗಿಸಿ ಕಪ್ಪೆ ತಯಾರಿಸಿದ ಉಡುಗೆ ಅತ್ಯುತ್ತಮವಾದುದೆಂದು ಬಹುಮಾನವನ್ನು ಕೊಡುತ್ತಾನೆ.

**ಈ ಕಥೆಯಂತೆ ಜಾನಪದ ಕಥೆಯೊಂದನ್ನು ಬರೆಯಿರಿ.**

## ಗಣೇಶ ಮತ್ತು ಕುಬೇರನ ಕಥೆ

ಸಂಪತ್ತಿನ ಅಧಿದೇವತೆ ಕುಬೇರನಿಗೆ 'ತಾನೇ ಶ್ರೀಮಂತ ದೇವರು' ಎಂಬ ಅಹಂಕಾರ ಇತ್ತು. ಹಾಗಾಗಿ ಒಂದು ದಿನ ಎಲ್ಲ ದೇವತೆಗಳಿಗೆ ಅದ್ದೂರಿ ಭೋಜನ ಕೂಟವೊಂದನ್ನು ಏರ್ಪಡಿಸುತ್ತಾನೆ. ಶಿವ- ಪಾರ್ವತಿಯರನ್ನೂ ಆಮಂತ್ರಿಸುತ್ತಾನೆ. ಆದರೆ ಶಿವ-ಪಾರ್ವತಿಯರಿಗೆ ಭೋಜನ ಕೂಟಕ್ಕೆ ಬರಲಾಗುವುದಿಲ್ಲ. ಹಾಗಾಗಿ ತಮ್ಮ ಪುತ್ರ ಗಣೇಶನನ್ನು ಭೋಜನ ಕೂಟಕ್ಕೆ ಕಳುಹಿಸುತ್ತಾರೆ. ಭೋಜನ ಕೂಟದಲ್ಲಿದ್ದ ಎಲ್ಲ ತಿನಿಸುಗಳನ್ನು ಗಣೇಶ ತಿಂದು ಖಾಲಿ ಮಾಡುತ್ತಾನೆ. ಅಷ್ಟೇ ಅಲ್ಲ ಕುಬೇರನ ಅಲಕಪುರಿಯಲ್ಲಿದ್ದ ಎಲ್ಲ ವಸ್ತುಗಳನ್ನು ತಿಂದು ಮುಗಿಸುತ್ತಾನೆ. ನಂತರ ಕುಬೇರನನ್ನೇ ತಿಂದು ಮುಗಿಸಲು ಹೊರಡುತ್ತಾನೆ. ಇದರಿಂದ ಭಯಗೊಂಡ ಕುಬೇರ ಸಹಾಯಕ್ಕಾಗಿ ಶಿವನ ಬಳಿಗೆ ಓಡಿಹೋಗುತ್ತಾನೆ. ಆಗ ಶಿವ ಕೈತುಂಬಾ ಹುರಿದ ಧಾನ್ಯಗಳನ್ನು ಗಣೇಶನಿಗೆ ನೀಡಿ ಅವನ ಹಸಿವನ್ನು ನೀಗಿಸುತ್ತಾನೆ. ಇದರಿಂದ ಕುಬೇರನಿಗೆ
ತನ್ನಲ್ಲಿದ್ದ ಅಹಂಕಾರ ನಿವಾರಣೆಯೂ ಆಗುತ್ತದೆ.

## ಚಟುವಟಿಕೆ 5: ಕರಕುಶಲ ಕಲೆ ತಿಳಿಯೋಣ ಬಾ

ಚಿತ್ರಗಳನ್ನು ಗಮನಿಸಿ, ವಿವಿಧ ಪ್ರಕಾರದ ಕರಕುಶಲ ಕಲೆಗಳ ಹೆಸರನ್ನು ಗುರುತಿಸಿ ಬರೆಯೋಣ. ಅಗತ್ಯವೆನಿಸಿದರೆ ಪೋಷಕರ ಸಹಾಯ ಪಡೆಯಿರಿ.



1. ಈ ಕರಕುಶಲ ಕಲೆಗಳ ಪ್ರಕಾರಗಳನ್ನು ನೀವು ಎಲ್ಲೆಲ್ಲಿ ನೋಡಿರುವಿರಿ ?

ನಮ್ಮೂರಿನ ಪಕ್ಕದ ಲಂಬಾಣಿಹಟ್ಟಿಯಲ್ಲಿ ಪುಟ್ಟಿಗಳನ್ನು ಹಿಡಿಯುತ್ತಾರೆ ಅದನ್ನು ನಾವು ನೋಡಿದ್ದೇವೆ. ನಾವು ಹಳ್ಳಿಯ ನಮ್ಮ ಮನೆಯ ಪಕ್ಕದಲ್ಲಿ ಕುಂಬಾರರು ಇದ್ದಾರೆ ಅವರು ಪ್ರತಿ ದಿವಸ ಮಡಕೆ ಮಾಡುವುದನ್ನು ನಾವು ನೋಡಿದ್ದೇವೆ. ಚಾಪೆ ಮಾಡುವುದನ್ನು ನಾವು ನೋಡಿಲ್ಲ ಗಣಪತಿ ಗೊಂಬೆ ತಯಾರಿಸುವುದನ್ನು ನೋಡಿದ್ದೇವೆ.

2. ನಿಮ್ಮ ಗ್ರಾಮದಲ್ಲಿ ಇಂತಹ ಕರಕುಶಲ ಕಲೆಗಳನ್ನು ಬಳಸಿ ಸಾಮಾಗ್ರಿಗಳನ್ನು ತಯಾರಿಸುವವರು ಇದ್ದಾರೆಯೇ? ಇದ್ದರೆ ಅಂಥವರ ಕುಶಲ ಕಲೆಯ ಬಗ್ಗೆ ಮೂರು–ನಾಲ್ಕು ವಾಕ್ಯ ಬರೆಯಿರಿ.


ನಮ್ಮ ಊರಿನಲ್ಲಿ ಮಡಕೆ ತಯಾರಿಸುವ ಕುಂಬಾರರು ಇದ್ದಾರೆ ಅವರು ಮಣ್ಣನ್ನು ತೆಗೆದುಕೊಂಡು ಬಂದು ಮನೆಯ ಮುಂದಿನ ಗುಂಡಿಯಲ್ಲಿ ಹಾಕಿ ಅದನ್ನು ಚೆನ್ನಾಗಿ ನೆನೆಸುತ್ತಾರೆ ಅದರಲ್ಲಿನ ಕಸ ಕಟ್ಟಿ ಕಲ್ಲುಗಳನ್ನು ತೆಗೆದು ಒಂದು ಚಕ್ರದ ಮೇಲೆ ಆ ಮಣ್ಣನ್ನು ಕೆಸರು ಮಾಡಿ ಇಟ್ಟು ಮಡಕೆ ತಯಾರಿಸುತ್ತಾರೆ ಮತ್ತು ಅದನ್ನು ಸುಡುತ್ತಾರೆ.

3. ನಿಮ್ಮೂರಿನಲ್ಲಿ ಒಂದು ಕರಕುಶಲ ಕಲೆ ಮಾಡುವುದನ್ನು ಗಮನಿಸಿ, ಅದರ ಚಿತ್ರ ಅಂಟಿಸಿ ಹಾಗೂ ಚಿತ್ರ ಬರೆಯಿರಿ.

## ಚಟುವಟಿಕೆ 6: ನಮ್ಮ ವಾಸ್ತುಶಿಲ್ಪ

ನೀಡಲಾದ ಸ್ಥಳಗಳ ವಾಸ್ತುಶಿಲ್ಪವನ್ನು ಪ್ರವಾಸ ಸಮಯದಲ್ಲಿ ನೋಡಿದ್ದಲ್ಲಿ ನೆನಪಿಸಿಕೊಳ್ಳಿ.



1. ಇವುಗಳಲ್ಲಿ ನೀವು ನೋಡಿರುವ, ಕೇಳಿರುವ, ಓದಿರುವುದನ್ನು ನೆನಪಿಸಿಕೊಳ್ಳಿ, ಅವುಗಳ ವಿಶೇಷತೆಯನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

ಮೊದಲನೇ ಚಿತ್ರ ನಾವು ನೋಡಿರುವುದಿಲ್ಲ ಅಂದಾಜು ಬೇಲೂರು ಹಳೇಬೀಡು ಆಗಿರಬಹುದು.

ಎರಡನೆಯ ಚಿತ್ರ ಮೈಸೂರು ಅರಮನೆ ಆಗಿದೆ ಇದು ಅತ್ಯಂತ ಸುಂದರವಾದ ವಾಸ್ತುಶಿಲ್ಪವಾಗಿದೆ. ಮೈಸೂರಿನ ಆಕರ್ಷಣೀಯ ಸ್ಥಳಗಳಲ್ಲಿ ಇದು ಒಂದು ಆಗಿದೆ. ಮೈಸೂರಿಗೆ ಹೋದವರೆಲ್ಲ ಇದನ್ನು ನೋಡಿಯೇ ಬರುತ್ತಾರೆ.

ಮೂರನೇಯ ಚಿತ್ರ ಹಂಪೆಯದ್ದಾಗಿದೆ ಹಂಪೆಯಲ್ಲಿ ರಥ ಇದಾಗಿದೆ ಪ್ರತಿಯೊಂದು ವಾಸ್ತುಶಿಲ್ಪವು ಬಹಳ ಸೋಜುಗದ ಕೆತ್ತನೆಯಾಗಿದೆ. ಇಲ್ಲಿ ವಿಜಯನಗರ ಸಾಮ್ರಾಜ್ಯದ ಅನೇಕ ಕುರುಹುಗಳನ್ನು ಇಲ್ಲಿ ನೋಡಬಹುದಾಗಿದೆ.ಹಂಪೆಯ ಕೂಲಂಕುಶವಾಗಿ ನೋಡುವುದು ಮೂರು ದಿನ ನಾಲ್ಕು ದಿನ ಬೇಕಾಗುತ್ತದೆ.

ನಾಲ್ಕನೆಯ ಚಿತ್ರ ಗೋಲ್ ಗುಂಬಜ್ ಇದು ಕರ್ನಾಟಕದ ಅತ್ಯಂತ ದೊಡ್ಡ ಗುಮ್ಮಟವಾಗಿದೆ. ಇದು ಬಿಜಾಪುರದಲ್ಲಿದೆ ಮೇಲೆ ಹತ್ತಿ ಹೋಗಿ ಗುಮ್ಮಟದಲ್ಲಿ ಕೂಗಿದ ಧ್ವನಿಯು ಏಳು ಬಾರಿ ಪ್ರತಿಧ್ವನಿ ಗೊಳ್ಳುತ್ತದೆ. ಮುಸಲ್ಮಾನ ದೊರೆಗಳಾದ ಆದಿಲ್ ಶಾಹಿಗಳ ವಾಸ್ತುಶಿಲ್ಪವಾಗಿದೆ.

2. ಇದೇ ರೀತಿ ನಿಮ್ಮ ಊರಿನಲ್ಲಿರುವ ದೇವಸ್ಥಾನ, ಐತಿಹಾಸಿಕ ಸ್ಮಾರಕ ನೋಡಿ ಅದರ ಚಿತ್ರ ಅಂಟಿಸಿ ಅಥವಾ ಚಿತ್ರ ಬರೆಯಿರಿ. ಜೊತೆಗೆ ಅದರ ಬಗ್ಗೆ ಹಿರಿಯರಿಂದ ತಿಳಿದುಕೊಂಡು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

ದುರ್ಗಾಂಬಿಕಾ ದೇವಸ್ಥಾನ

ಶ್ರೀ ದುರ್ಗಾಂಬಿಕಾ ದೇವಸ್ಥಾನವು ಕರ್ನಾಟಕದ ದಾವಣಗೆರೆ ಜಿಲ್ಲೆಯ ಶಿವಾಜಿ ನಗರದಲ್ಲಿ ಹಳೆಯ ಪಟ್ಟಣ ಅಥವಾ ಹಳೇಪೇಟೆ ಪ್ರದೇಶದಲ್ಲಿದೆ.

ಇಲ್ಲಿಯ ಪ್ರಮುಖ ಪ್ರವಾಸಿ ಮತ್ತು ಯಾತ್ರಿಕ ಸ್ಥಳವೆಂದರೆ ದೊಡ್ಡ ದುರ್ಗಾಂಬಿಕಾ ದೇವಾಲಯ.

ದುರ್ಗಾಂಬಿಕಾ ದೇವಾಲಯ - ಇತಿಹಾಸ

ದುರ್ಗಾಂಬಿಕಾ ದೇವಸ್ಥಾನವಿರುವ ದಾವಣಗೆರೆಗೆ ಶ್ರೀಮಂತ ಇತಿಹಾಸವಿದೆ. ಇದು ಚಾಲುಕ್ಯರ ಕಾಲದ ನೊಳಂಬವಾಡಿ ಪ್ರಾಂತ್ಯದ ಭಾಗವಾಗಿತ್ತು. ಇದು ಚಾಲುಕ್ಯರಿಂದ ಪಾಂಡ್ಯರು, ಹೊಯ್ಸಳರು ಮತ್ತು ವಿಜಯನಗರ ರಾಜರಿಗೆ ಕೈ ಬದಲಾಯಿತು. ವಿಜಯನಗರ ಸಾಮ್ರಾಜ್ಯದ ಪತನದ ನಂತರ, ದಾವಣಗೆರೆಯು ಕೆಲವು ಕಾಲ ಪಾಳೇಗಾರ ನಾಯಕರ ವಶದಲ್ಲಿತ್ತು. ಆಗ ಮರಾಠರು ಇಲ್ಲಿ ಕೆಲಕಾಲ ಆಳ್ವಿಕೆ ನಡೆಸಿದರು. ನಂತರ ಇದನ್ನು ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ವಹಿಸಿಕೊಂಡರು ಮತ್ತು ತಡವಾಗಿ ಮೈಸೂರು ಮಹಾರಾಜರು ವಹಿಸಿಕೊಂಡರು. ಈ ಅವಧಿಯಲ್ಲಿ, ದಾವಣಗೆರೆ ಪ್ರಮುಖ ಮತ್ತು ಸಮೃದ್ಧ ಜವಳಿ ಕೇಂದ್ರವಾಯಿತು.ಸುಮಾರು 200 ವರ್ಷಗಳ ಹಿಂದೆ ದುಗತ್ತಿ ಗ್ರಾಮದಿಂದ ಕಲ್ಲನ್ನು ತಂದು ಈ ದೇವಾಲಯದಲ್ಲಿ ಪ್ರತಿಷ್ಠಾಪಿಸಿ ದುರ್ಗಾದೇವಿಯಾಗಿ ಪೂಜಿಸಲಾಯಿತು ಎಂದು ಹೇಳಲಾಗುತ್ತದೆ. 1932 ರಲ್ಲಿ, ಈ ದೇವಾಲಯವನ್ನು ಸುಂದರವಾದ ದುರ್ಗಾಂಬಿಕಾ ದೇವಾಲಯವಾಗಿ ಪರಿವರ್ತಿಸಲಾಯಿತು. ಪ್ರಧಾನ ದೇವತೆ ದುರ್ಗಾಂಬಿಕಾ, ಇದನ್ನು ದುರ್ಗಮ್ಮ, ದುರ್ಗಾಂಬಿಕಾ ಮತ್ತು ದುರ್ಗವ್ವ ಎಂದು ಕರೆಯಲಾಗುತ್ತದೆ.

ದುರ್ಗಾಂಬಿಕಾ ದೇವಸ್ಥಾನಕ್ಕೆ ಹೇಗೆ ಹೋಗುವುದು

ದುರ್ಗಾಂಬಿಕಾ ದೇವಸ್ಥಾನವು ದಾವಣಗೆರೆ ನಗರದಲ್ಲಿದೆ. ದಾವಣಗೆರೆಯು ಬಸ್ ಮಾರ್ಗಗಳಿಂದ ಉತ್ತಮ ಸಂಪರ್ಕವನ್ನು ಹೊಂದಿದೆ ಮತ್ತು ತನ್ನದೇ ಆದ ರೈಲು ನಿಲ್ದಾಣವನ್ನು ಸಹ ಹೊಂದಿದೆ. ನೀವು ದಾವಣಗೆರೆಯನ್ನು ತಲುಪಿದ ನಂತರ, ಈ ದೇವಸ್ಥಾನವನ್ನು ತಲುಪಲು ನೀವು ಸ್ಥಳೀಯ ಬಸ್ ಸೇವೆ ಅಥವಾ ಆಟೋ ರಿಕ್ಷಾವನ್ನು ಆರಿಸಿಕೊಳ್ಳಬಹುದು. ಮಂಗಳವಾರ ಮತ್ತು ಶುಕ್ರವಾರ ಇಲ್ಲಿ ಪ್ರತಿ ವಾರ ವಿಶೇಷ ದಿನಗಳು. ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಯುವ ದೇವಾಲಯದ ಜಾತ್ರೆ ಅಥವಾ ಜಾತ್ರೆ ಈ ಪ್ರದೇಶದ ಪ್ರಮುಖ ಹಬ್ಬವಾಗಿದೆ. ಇದು ಸ್ಥಳಕ್ಕೆ ಭೇಟಿ ನೀಡಲು ಸೂಕ್ತ ಸಮಯವಾಗಿರುತ್ತದೆ.

## ಚಟುವಟಿಕೆ 7: ನೃತ್ಯಕಲೆಯ ಅರಿಯುವ.

- ಒಡಿಸ್ಸಿ – ಒಡಿಸ್ಸಾ
- ಸತ್ರಿಯ – ಅಸ್ಸಾಂ
- ಲಾವಣಿ – ಮಹಾರಾಷ್ಟ್ರ

1. ಇತರೆ ನೃತ್ಯಕಲೆಗಳನ್ನು ಬರೆಯಿರಿ. ಹಿರಿಯರ ಸಹಾಯ ಪಡೆಯಿರಿ.

- ಭರತನಾಟ್ಯ,ತಮಿಳುನಾಡು
- ಕಥಕ್......ಉತ್ತರ ಪ್ರದೇಶ
- ಕಥಕ್ಕಳಿ.....ಕೇರಳ ,
- ಮಣಿಪುರಿ.......ಮಣಿಪುರ
- ಕೂಚಿಪುಡಿ.....ಆಂಧ್ರಪ್ರದೇಶ
- ಭಾಂಗ್ರಾ/ಗಿಡ್ಡಾ ......ಪಂಜಾಬ್
- ಗರ್ಬಾ ......ಗುಜರಾತ್
- ರೂಫ್...... ಕಾಶ್ಮೀರ
- ಮೋಹಿನಿಯಾಟ್ಟಂ.....ಕೇರಳ

2. ನೃತ್ಯದ ವಿವಿಧ ಚಿತ್ರಗಳನ್ನು ಸಂಗ್ರಹಿಸಿ, ಇಲ್ಲಿ ಅಂಟಿಸಿರಿ.



. ಮೋಹಿನಿಯಾಟ್ಟಂ
ಕೇರಳ, ದಕ್ಷಿಣ ಭಾರತ



6. ಒಡಿಸ್ಸಿ
ಒಡಿಶಾ, ಪೂರ್ವ ಭಾರತ



15. ಸತ್ರಿಯಾ ನೃತ್ಯ
ಅಸ್ಸಾಂ, ಈಶಾನ್ಯ ಭಾರತ



4. ಮಣಿಪುರಿ
ಮಣಿಪುರ, ಈಶಾನ್ಯ ಭಾರತ



11. ಛಾವ್



2. ಕಥಕ್
ಉತ್ತರ ಪ್ರದೇಶ, ಉತ್ತರ ಭಾರತ



5. ಕೂಚಿಪುಡಿ
ಆಂಧ್ರಪ್ರದೇಶ



3. ಕಥಕ್ಕಳಿ
ಕೇರಳ, ದಕ್ಷಿಣ ಭಾರತ

3. ಇವುಗಳಲ್ಲಿ ನೀವು ಇಷ್ಟ ಪಡುವ ಒಂದು ನೃತ್ಯ ಪ್ರಕಾರವನ್ನು [illegible]

ಯಕ್ಷಗಾನ. ಏಕೆಂದರೆ ಇದು ನಮ್ಮ ಕರ್ನಾಟಕದ ಜಾನಪದ ನೃತ್ಯ ಪ್ರಕಾರವಾಗಿದೆ. ಇದರಲ್ಲಿ ವೇಷಭೂಷಣ ನನಗೆ ಬಹಳ ಇಷ್ಟ. ಕಿರೀಟ, ಮುಖಕ್ಕೆ ಬಣ್ಣ ಇವೆಲ್ಲಾ ಬಹಳ ಆಕರ್ಷಕವಾಗಿ ಕಾಣುತ್ತವೆ

ಚಟುವಟಿಕೆ 8: ಪದಬಂಧ ರಚಿಸೋಣ.

| | | | | | | | | | | |
|---|---|---|---|---|---|---|---|---|---|---|
| ಎ | ಕೆ | ಗ್ರ | ಶಿ | ವ | ನು | ಭಿ | ಕ್ಷ | ಕೆ | ಬಂ | ದ |
| ಲ್ಲೋ | ರೆ | ಚೆ | ಯ | ಳ | ಕ | ನ | ಡು | ಟ | ರ್ಗ | ಮ್ಮ |
| ಜೋ | ಈ | ಲ್ಲಿ | ಡು | ಖ | ಥ | ಜ್ಮ | ಸಂ | ಗೂ | ತಿಂ | ರ್ಗಾ |
| ಗ | ಖು | ದ | ಲ | ಭಾ | ಗ್ಯ | ದ | ಬ | ಳೆ | ಗಾ | ರ |
| ಪ್ಪ | ಛ | ರು | ಯ | ಖಾ | ಜೀ | ಗು | ಲಂ | ಣ | ಳು | ಣ |
| ನಿ | ಪು | ಮ | ಇ | ತಾ | ರೆ | ಯಾ | ಜ್ಮ | ನೆ | ಮು | ರೂ |
| ನ್ನ | ಫ | ಲ್ಲಿ | ಷ | ಕ | ನ್ಮ | ರಾ | ಕ | ಡಿ | ಳು | ಲ |
| ರ | ಝು | ಗೆ | ಯೋ | ದ | ಬಾ | ಲಿ | ಬ | ಸ್ಮ | ಗಿ | ಪ |
| ಮಾ | ಮ | ಯಾ | ಕೆ | ಬ | ಡ್ಡಾ | ಡ್ತಿ | ತ | ಮ್ಮ | ದ | ಸಾ |
| ನೆ | ರ | ಕ | ಪ | ಗೀ | ಪಾ | ಜಾ | ಣ | ಲ್ಲ | ವೋ | ಸಿ |

**ಸುಳಿವುಗಳು:-**

- ರನೆಮಾನ್ನಪ್ಪನಿಎಜೋಲ್ಲೊಗ ಎಲ್ಲೋ ಜೋಗಪ್ಪ ನಿನ್ನರಮನೆ
- ಗೆಚದಮಯಾಲ್ಲಿರುಲ್ಲಿ ಚೆಲ್ಲಿದರು ಮಲ್ಲಿಗೆಯಾ
- ಬಂ ಶಿನುಬಿವಕೆದಕ್ಷ ಶಿವನು ಭಿಕ್ಷೆಕೆ ಬಂದ
- ರಗ್ಯಾಳೆಬಾದಗಾಬ ಭಾಗ್ಯದ ಬಳೆಗಾರ
- ವೋತಿಂಳುಗಾದಮುಗಿಳು ತಿಂಗಳು ಮುಳುಗಿದವೋ
- ಡ್ತಿತಯಾಬಕೆದ್ಡಾಮ್ಮ ಯಾಕೆ ಬಡಿದಾಡ್ತಿ ತಮ್ಮ

### ಚಟುವಟಿಕೆ 9: ತಿಳಿಯೋಣ ಹಬ್ಬ

1. ಈ ಚಿತ್ರವನ್ನು ನೋಡಿ ಹಬ್ಬದ ಹೆಸರನ್ನು ಗುರುತಿಸಿ ಬರೆಯಿರಿ.



2. ಈ ಹಬ್ಬವನ್ನು ಆಚರಿಸುವ ವಿಧಾನವನ್ನು ಕುರಿತು ಬರೆಯಿರಿ. ಅಗತ್ಯವೆನಿಸಿದರೆ ಹಿರಿಯರ ನೆರವು ಪಡೆಯಿರಿ.

ಕರ್ನಾಟಕದಲ್ಲಿ ಎಳ್ಳು, ಸಕ್ಕರೆ, ಬೆಲ್ಲ, ಕೊಬ್ಬರಿ, ಕಡಲೆಗಳ ಮಿಶ್ರಣವನ್ನು ನೆರೆಹೊರೆಯವರಿಗೆ ಬಂಧು-ಮಿತ್ರರಿಗೆ ಹಂಚುವ ಸಾಮಾಜಿಕ ಸಂಪ್ರದಾಯ ಈ ಸಂಕ್ರಾಂತಿ ಹಬ್ಬದ ವಿಶೇಷಗಳಲ್ಲೊಂದು. ಹಲವೆಡೆಗಳಲ್ಲಿ ದನ-ಕರುಗಳಿಗೆ ಮೈ ತೊಳೆದು, ಹೊತ್ತಿಸಿದ ಬೆಂಕಿಯನ್ನು ನೆಗೆದು ದಾಟಿಸುವ ಪದ್ಧತಿಯೂ ಉಂಟು. ಗಾಳಿ ಪಟ ಹಾರಿಸುವುದು, ಪವಿತ್ರ ನದಿಗಳಲ್ಲಿ ಸ್ನಾನ ಮಾಡುವುದು, ದಾನಗಳನ್ನು ನೀಡುವುದು ಮಿತ್ರರನ್ನು ಭೇಟಿಯಾಗುವ ಸ್ಪರ್ಧೆಗಳು ಹೀಗೆ ವಿವಿಧ ಆಚರಣೆಗಳು ಈ ಸಂಕ್ರಾಂತಿ ಹಬ್ಬದ ವಿಶೇಷಗಳಾಗಿವೆ.

3. ಇದೇ ರೀತಿ ನಿಮ್ಮ ಊರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಆಚರಿಸುವ ವಿವಿಧ ಹಬ್ಬದ ಹೆಸರುಗಳನ್ನು ಪಟ್ಟಿಮಾಡಿರಿ. ಪಟ್ಟಿ ಮಾಡಿರುವ ಹಬ್ಬಗಳ ವಿಶೇಷತೆಗಳನ್ನು ಬರೆಯಿರಿ.

**ಗೌರಸಮುದ್ರ ಮಾರಮ್ಮ ಹಬ್ಬ:ಈ ಹಬ್ಬದಲ್ಲಿ ಎಲ್ಲಾ ಹಳ್ಳಿಗಳಲ್ಲಿ ಕೋಳಿ ಕುರಿ ಇತ್ಯಾದಿ ಮಾರಮ್ಮನಿಗೆ ಬಲಿ ನೀಡಿ ಪ್ರಸಾದವೆಂದು ಅದನ್ನು ಸೇವಿಸುತ್ತಾರೆ.**

**ಹಿಂದೂ ಮಹಾ ಗಣಪತಿ ಹಬ್ಬ: ನಮ್ಮ ದಾವಣಗೆರೆಯಲ್ಲಿ ಗಣಪತಿಯನ್ನು ಸ್ಥಾಪಿಸಿ ಒಂದು ದಿನ ಅದನ್ನು ವಿಸರ್ಜಿಸುವ ಹಬ್ಬ ನಡೆಯುತ್ತದೆ. ಭಾರಿ ಸಂಖ್ಯೆಯಲ್ಲಿ ಜನ ಸೇರುತ್ತಾರೆ.**

**ತರಳಬಾಳು ಹುಣ್ಣಿಮೆ ಉತ್ಸವ: ಪ್ರತಿ ತಾಲೂಕಿನಲ್ಲಿ ಒಂದು ವರ್ಷ ನಡೆಯುತ್ತದೆ ದಾವಣಗೆರೆ ಜಿಲ್ಲೆಯ ಎಲ್ಲಾ ಜನ ಅಲ್ಲಿ ಭಾಗವಹಿಸುತ್ತಾರೆ.**

**ದೀಪಾವಳಿ: ಸುತ್ತಮುತ್ತಲ ಊರುಗಳಲ್ಲಿ ಬೇರೆ ಬೇರೆ ದಿಸ ಒಂದು ತಿಂಗಳಲ್ಲಿ ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ.**

**ದುರ್ಗಾಂಬಿಕ ಜಾತ್ರೆ: ದಾವಣಗೆರೆಯಲ್ಲಿ ದುರ್ಗಾಂಬಿಕಾ ಜಾತ್ರಾ ವಿಜೃಂಭಣೆಯಿಂದ ನಡೆಯುವುದು. ಸುತ್ತಮುತ್ತಲ ಜನ ಭಾಗವಹಿಸುತ್ತಾರೆ.**

4. ಸಹಪಾಠಿಗಳ ನೆರವಿನಿಂದ ಒಂದು ಹಬ್ಬದ ಬಗ್ಗೆ ಬರೆಯಿರಿ.

ಹೆಸರು: ಅಜ್ಜಿ ಹಬ್ಬ

ಆಚರಣೆ: ಆಷಾಢ ತಿಂಗಳಲ್ಲಿ ಬರುವ 4 ಶುಕ್ರವಾರಗಳು ಮುಗಿದ ಬಳಿಕ ಅಜ್ಜಿ ಹಬ್ಬ ಮಾಡಲಾಗುತ್ತದೆ. ಮಕ್ಕಳ ಮೈಮೇಲೆ ಗುಳ್ಳೆಗಳು ಆಗುವುದು, ಜ್ವರ ಬರುವುದು/ಅಮ್ಮ ರೋಗ ಬಾರದಿರಲು ಮಾಡುವ ಆಚರಣೆಯಾಗಿದೆ

ತಿನಿಸು: ಬಾಳೆಎಲೆಯಲ್ಲಿ ಸಿಹಿ ಪದಾರ್ಥ ತಯಾರಿಸುತ್ತಾರೆ

ಉಡುಪು: ಹೊಸ ಬಟ್ಟೆ ಉಡುತ್ತಾರೆ

ಪ್ರಯೋಜನ: ಮಳೆಗಾಲದಲ್ಲಿ ಮಕ್ಕಳಿಗೆ ರೋಗ ಬರಬಾರದು ಎನ್ನುವುದಕ್ಕೆ ಈ ರೀತಿ ಹಬ್ಬ ಮಾಡಲಾಗುತ್ತದೆ.

ವಿಶೇಷತೆಗಳು: ವಿಶೇಷವಾಗಿ ಮಧ್ಯ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಇಂತಹ ಅಜ್ಜಿ ಹಬ್ಬ ಪ್ರಸಿದ್ಧವಾಗಿದೆ. ಮಕ್ಕಳ ಆರೋಗ್ಯ ಚೆನ್ನಾಗಿರಲಿ ಎಂಬುವುದು ಅವರ ಮುಖ್ಯ ಉದ್ದೇಶ.

## ನನ್ನ ಕಲಿಕೆ

| ಕ್ರ. ಸಂ | ಕಲಿಕೆ | ಸರಿ ಗುರುತು |
|---|---|---|
| 1 | ಜಾನಪದಗೀತೆ, ಕಥೆಗಳನ್ನು ಅರ್ಥಮಾಡಿಕೊಳ್ಳುತ್ತೇನೆ. | |
| 2 | ನಮ್ಮೂರಿನ ಜನಪದಗೀತೆ, ಕಥೆಗಳನ್ನು ನನ್ನ ಮಾತುಗಳಲ್ಲಿ ಬರೆಯುತ್ತೇನೆ. | |
| 3 | ನನ್ನ ಪರಿಸರದಲ್ಲಿರುವ ಆಯ್ದ ಜನಪದಗೀತೆ/ಕಥೆ/ಶಿಶುಗೀತೆಗಳು ಅಭಿವ್ಯಕ್ತಿಸುತ್ತಿರುವ ವಿಷಯಾಂಶಗಳನ್ನು ಮಂಡಿಸುತ್ತೇನೆ. | |
| 4 | ನನ್ನ ಪರಿಸರದಲ್ಲಿರುವ ಆಯ್ದ ಜನಪದಗೀತೆ / ಕಥೆ / ಶಿಶುಗೀತೆಗಳಲ್ಲಿನ ಉತ್ತಮ ಅಂಶಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. | |

### ಶಿಕ್ಷಕರ ಹಿಮ್ಮಾಹಿತಿ

ದಿನಾಂಕ: ಶಿಕ್ಷಕರ ಸಹಿ